# ಅಮೂಲ್ ಹುಡುಗಿಯ ಅಜ್ಜ!

ಪ್ರವೀಣ ಕುಲಕರ್ಣಿ



ಬಾಬ್‌ಕಟ್ ಮಾಡಿಸಿಕೊಂಡು, ತಲೆಯ ಮೇಲೊಂದು ಜುಟ್ಟು ಬೇರೆ ಕಟ್ಟಿಕೊಂಡು ಬೆಣ್ಣೆ ಸವರಿದ ಬ್ರೆಡ್‌ಅನ್ನು ಕೈಯಲ್ಲಿ ಹಿಡಿದುಕೊಂಡು ಆಸೆಗಣ್ಣಿನಿಂದ ನಾಲಿಗೆ ಚಾಚಿದ ಹುಡುಗಿಯ ಚಿತ್ರವನ್ನು ಯಾರು ತಾನೆ ನೋಡಿಲ್ಲ? ಅವಳ ಕೂದಲು ನೀಲಿಬಣ್ಣಕ್ಕೆ ತಿರುಗಿದ್ದೇಕೋ? ಅದಿರಲಿ, ಅವಳು 'ಅಟ್ಟರ್ಲಿ ಬಟರ್ಲಿ ಡೆಲೀಶಿಯಸ್' ಆದ ಬ್ರೆಡ್ ಹಿಡಿದ ಚಿತ್ರ ನೋಡಿದರೆ ಅದನ್ನು ಕಿತ್ತುಕೊಂಡು ನಾವೇ ಬಾಯಿಗೆ ಇಳಿಸಬೇಕು ಎನಿಸುತ್ತದೆ. ಅಂದಹಾಗೆ, ಚುಕ್ಕಿ ಫ್ರಾಕಿನ ಆ ಹುಡುಗಿ ಬೇರೆ ಯಾರೂ ಅಲ್ಲ, ಅಮೂಲ್ ಗರ್ಲ್! ಈ ಹುಡುಗಿಯ ಅಜ್ಜನೇ ಸಿಲ್ವೆಸ್ಟರ್ ದಾಕುನ್ಹಾ ಎಂಬ ಜಾಹೀರಾತು ದಿಗ್ಗಜ.

ಅಮೂಲ್‌ನ ವ್ಯವಸ್ಥಾಪಕ ನಿರ್ದೇಶಕ ಜಯೇನ್ ಮೆಹ್ತಾ, ಮೊನ್ನೆ ಟ್ವಿಟರ್‌ನಲ್ಲಿ ದಾಕುನ್ಹಾ ಅವರ ಸಾವಿನ ಸುದ್ದಿಯನ್ನು ಪ್ರಕಟಿಸಿದ್ದೇ ತಡ, ಅಮೂಲ್ ಗರ್ಲ್‌ನ ಅಭಿಮಾನಿಗಳೆಲ್ಲ 'ಅಯ್ಯಯ್ಯೊ' ಎಂದು ಮಮ್ಮಲ ಮರುಗಿದರು. ಅವರ ಪಾಲಿಗೆ ಕಾಲ ಐವತ್ತು ವರ್ಷಗಳಷ್ಟು ಹಿಂದಕ್ಕೆ ಸರ್ರನೆ ಜಾರಿತು. 'ಅಟ್ಟರ್ಲಿ ಬಟರ್ಲಿ ಡೆಲೀಶಿಯಸ್' ಅಂತ ಆ ಹುಡುಗಿಯ ಕೈಯಲ್ಲಿ ಬ್ರೆಡ್ ಹಿಡಿಸಿ, ಬಾಯಲ್ಲಿ ನೀರೂರಿಸುವಂತೆ ಮಾಡಿದ ದಾಕುನ್ಹಾ ಅಜ್ಜನನ್ನು ಅತ್ಯಂತ ಪ್ರೀತಿಯಿಂದ ನೆನಪಿಸಿಕೊಂಡರು. ಸಾಮಾಜಿಕ ಜಾಲತಾಣಗಳೇ ಇಲ್ಲದ ಕಾಲದಲ್ಲಿ ಅಮೂಲ್‌ನ ಬೆಣ್ಣೆಯನ್ನು ಭಾರತದ ಮನೆಮನೆಯ ತಿಂಡಿಗೆ ಸವರುವಂತೆ ಮಾಡಿದ್ದ ಈ ಅಜ್ಜನ ಹಿರಿಮೆಯನ್ನು ಮನೆ ಮನೆಯ ಮಾತಾಗುವಂತೆ ಮಾಡುತ್ತಿವೆ.

ಸುಮಾರು ಐವತ್ತೈದು ವರ್ಷಗಳಷ್ಟು ಹಿಂದಿನ ಮಾತು. ಭಾರತದಲ್ಲಿ ಎಲೆಕ್ಟ್ರಾನಿಕ್ ಇಲ್ಲವೆ ಮುದ್ರಣ ಮಾಧ್ಯಮ ಈಗಿನಂತೆ ಬೆಳೆದಿರಲಿಲ್ಲ. ಬೆಳೆಯುವ ಪ್ರಶ್ನೆ ಏನು ಬಂತು, ಇನ್ನೂ ಶೈಶವಾವಸ್ಥೆಯಲ್ಲೂ ಇರಲಿಲ್ಲ. ಆಗ ದಾಕುನ್ಹಾ ಅವರ ಕೈಯಿಂದ ಅವತಾರ ಎತ್ತಿದವಳು ಅಮೂಲ್ ಗರ್ಲ್. ಜಗತ್ತಿನಲ್ಲಿ ಇಷ್ಟೊಂದು ಸುದೀರ್ಘ ಅವಧಿಯವರೆಗೆ ಜಾಹೀರಾತು ಆಂದೋಲನದ ಭಾಗವಾಗಿ ನಿಂತ ಮತ್ತೊಂದು ಪಾತ್ರ ಸಿಗುವುದಿಲ್ಲ ಎಂದರೆ ನಮ್ಮ ಈ ಹುಡುಗಿಯ ಪ್ರಭಾವ ಹೇಗಿದ್ದೀತು ಎನ್ನುವುದನ್ನು ನೀವೇ ಊಹಿಸಿ.

ಅಮೂಲ್ ಜತೆಗಿನ ದಾಕುನ್ಹಾ ಅವರ ಯಾತ್ರೆ ಶುರುವಾಗಿದ್ದು ಕೂಡ ಒಂದು ರೋಚಕ ಕಥೆ. ಅಮೂಲ್ ಅನ್ನು ಹುಟ್ಟುಹಾಕಿದ ವರ್ಗೀಸ್ ಕುರಿಯನ್ ಅವರು, ಸಂಸ್ಥೆಯಿಂದ ಉತ್ಪಾದಿಸುತ್ತಿದ್ದ ಬೆಣ್ಣೆಗೆ ಪ್ರಚಾರ ನೀಡಲು ಏನು ಮಾಡಬೇಕೆಂದು ತಲೆ ಕೆರೆದುಕೊಳ್ಳುತ್ತಿದ್ದರು. ಆಗ ಅವರು ಸಂಪರ್ಕಿಸಿದ್ದೇ ದಾಕುನ್ಹಾ ಅಡ್ವರ್ಟೈಸಿಂಗ್ ಕಂಪನಿಯನ್ನು. ಹುಡುಗಿಯ ಪಾತ್ರವೊಂದನ್ನು ಸೃಷ್ಟಿಸಿ, ಪ್ರಚಾರಕ್ಕೆ ಒಂದು ವಿನೂತನ ಟ್ವಿಸ್ಟ್ ಕೊಡಲು ದಾಕುನ್ಹಾ ನಿರ್ಧರಿಸಿದಾಗ, ಆ ಪಾತ್ರದ ಸನ್ನಿವೇಶಕ್ಕೊಂದು 'ಅಟ್ಟರ್ಲಿ ಬಟರ್ಲಿ ಡೆಲೀಶಿಯಸ್' ಎಂಬ ಘೋಷವಾಕ್ಯವನ್ನು ಕೊಟ್ಟವರು ದಾಕುನ್ಹಾ ಅವರ ಪತ್ನಿ ನಿಶಾ. 1967ರ ಸುಮಾರಿಗೆ ಹೀಗೆ ಹುಟ್ಟಿಕೊಂಡ ಪುಟ್ಟ ಪೋರಿ, ಐವತ್ತೈದು ವರ್ಷಗಳು ಸಂದುಹೋದರೂ ಅಷ್ಟೇ ವಯಸ್ಸನ್ನು, ಅದೇ ತಾಜಾತನವನ್ನು ಉಳಿಸಿಕೊಂಡು, ಗ್ರಾಹಕರನ್ನು ಹೊಸ ಉತ್ಪನ್ನಗಳ ಕಡೆಗೆ, ಹೊಸ ವಿಚಾರಗಳ ಕಡೆಗೆ ಸೆಳೆಯುತ್ತಲೇ ಇದ್ದಾಳೆ.

ಅಮೂಲ್ ಗರ್ಲ್ ತುಂಬಾ ಚೂಟಿ. ಬೇರೆಯವರನ್ನು ಗೇಲಿ ಮಾಡುವುದು, ಅವರ ಕಾಲು ಎಳೆಯುವುದು – ಇಂತಹ ಕೆಲಸಗಳಲ್ಲೂ ಮೋಜು ಕಂಡವಳು. ಅದೇ ಕಾರಣಕ್ಕೆ ವಿವಾದವನ್ನೂ ಮೈಮೇಲೆ ಎಳೆದುಕೊಂಡವಳು. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಿದ್ದ ಜಗಮೋಹನ್ ದಾಲ್ಮಿಯಾ ವಿವಾದದಲ್ಲಿ ಸಿಲುಕಿದಾಗ, ಅಮೂಲ್ ಗರ್ಲ್, 'ದಾಲ್ಮಿಯಾ ಮೇ ಕುಚ್ ಕಾಲಾ ಹೈ?' ಎಂದು ಕಾಲೆಳೆದಿದ್ದಳು. ದಾಲ್ಮಿಯಾ ಅವರು ಅಮೂಲ್ ವಿರುದ್ಧ ₹ 500 ಕೋಟಿ ಮೊತ್ತದ ಮಾನಹಾನಿ ಮೊಕದ್ದಮೆಯನ್ನು ಹೂಡುವುದಾಗಿ ಬೆದರಿಕೆ ಹಾಕಿದ ಕುರಿತೂ ವರದಿಯಾಗಿತ್ತು.

ಅಮೂಲ್ ಹುಡುಗಿ ಇಷ್ಟಕ್ಕೆ ಸುಮ್ಮನಾಗಿರಲಿಲ್ಲ. ಬ್ರಿಟಿಷ್ ಏರ್‌ವೇಸ್ ಸಂಸ್ಥೆಯು ಸಚಿನ್ ತೆಂಡೂಲ್ಕರ್ ಅವರ ಬ್ಯಾಗ್‌ಅನ್ನು ಬೇರೆ ವಿಮಾನದಲ್ಲಿ ಸಾಗಿಸಿದ ಸುದ್ದಿ ಹೊರಬಿದ್ದಾಗ, ಆ ಸಂಸ್ಥೆಯನ್ನು 'British Errways' ಎಂದು ಆಕೆ ಕಾಲೆಳೆದಿದ್ದಳು. ಇದರಿಂದ ಸಿಟ್ಟು ಮಾಡಿಕೊಂಡ ಬ್ರಿಟಿಷ್ ಏರ್‌ವೇಸ್ ಸಂಸ್ಥೆಯು ಅಮೂಲ್ ಕಚೇರಿಗೆ ಕರೆಮಾಡಿ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತ್ತು. ಇಂಡಿಯನ್ ಏರ್‌ಲೈನ್ಸ್ ಅನ್ನೂ ಈಕೆ ಕೆಣಕದೆ ಬಿಟ್ಟಿಲ್ಲ. ಈ ಜಾಹೀರಾತನ್ನು ಹಿಂಪಡೆಯದಿದ್ದರೆ ವಿಮಾನದಲ್ಲಿ ಅಮೂಲ್ ಬೆಣ್ಣೆಯನ್ನು ಬಳಕೆ ಮಾಡುವುದಿಲ್ಲ ಎಂದು ಇಂಡಿಯನ್ ಏರ್‌ಲೈನ್ಸ್ ಎಚ್ಚರಿಕೆ ನೀಡಿದ್ದೂ ಆಯಿತು. ಮಹಾರಾಷ್ಟ್ರಿಗರ ಆರಾಧ್ಯದೈವ ಗಣಪನನ್ನೂ ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನೂ ಅಮೂಲ್ ಹುಡುಗಿ ಕಾಲೆಳೆಯದೆ ಬಿಟ್ಟಿಲ್ಲ. ಆ ಹುಡುಗಿಯ ಇಂತಹ ತುಂಟತನಗಳಿಗೆಲ್ಲ ದಾಕುನ್ಹಾ ಅವರೇ ಕಾರಣ ಎಂದು ಬೇರೆ ಹೇಳಬೇಕಿಲ್ಲ.

ದಾಕುನ್ಹಾ ಅವರಿಗೆ ರಂಗಭೂಮಿಯ ಮೇಲೆ ವಿಶೇಷ ಆಸಕ್ತಿ ಇತ್ತು. ರಂಗ ಚಟುವಟಿಕೆಗಳಲ್ಲೂ ಅವರು ಭಾಗವಹಿಸುತ್ತಿದ್ದರು. ಜಾಹೀರಾತು ಪಾತ್ರಗಳ ಸೃಷ್ಟಿಯಲ್ಲಿ ಅವರ ಈ ಆಸಕ್ತಿಯೂ ವಿಶೇಷವಾಗಿ ಕೆಲಸ ಮಾಡಿರಲಿಕ್ಕೆ ಸಾಕು. ತನ್ನನ್ನು ಸೃಷ್ಟಿಸಿದ ವ್ಯಕ್ತಿಯನ್ನೇ ಹಿಂದಿಕ್ಕಿ ಆ ಹುಡುಗಿ ಇಷ್ಟೊಂದು ಜನಪ್ರಿಯಳಾಗುತ್ತಾಳೆ ಎಂಬ ಕಲ್ಪನೆ ಸ್ವತಃ ದಾಕುನ್ಹಾ ಅವರಿಗೂ ಇರಲಿಲ್ಲ. ಕೈಬರಹದ ಚಿತ್ರವಾಗಿ ರೂಪತಾಳಿದವಳು ಈ ಹುಡುಗಿ. ಈಗ ಅಜ್ಜ ಇಲ್ಲ, ಮೊಮ್ಮಗಳ ಜೈತ್ರಯಾತ್ರೆ ಮಾತ್ರ ಮುಂದುವರಿದಿದೆ. ವ್ಯಕ್ತಿಯೊಬ್ಬ ಅಳಿದ ಮೇಲೂ ಉಳಿಯುವುದು ಅಂದರೆ ಹೀಗೇ ಅಲ್ಲವೇ? ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65